<u>(ಪಿ ಡಬ್ಲೂ 9)ಪ್ರಮಾಣ ವಚನ ಭೋಧಿಸಿದ ದಿನಾಂಕಃ 17-10-2025</u>
<u>ಮುಂದುವರಿದ ಮುಖ್ಯ ವಿಚಾರಣೆ ವಿಶೇಷ ಸರಕಾರಿ ಅಭಿಯೋಜಕರಿಂದ</u>

12. ದಿಃ 30-10-2010 ರಂದು ಮ 3-00 ಗಂಟೆಗೆ ನಿಪಿ 2 ರ ನಂತರ ಚಾಸಾಃ 1 ಮತ್ತು 2 ರವರಿಗೆ ನಾನು ಮೇಲೆ ತಿಳಿಸಿದಂತೆ ಎಸಿ ಕಛೇರಿಗೆ ಕಳುಹಿಸಿ ಕೊಟ್ಟದ್ದು ನಾನು ಸಿಬ್ಬಂದಿ ಮತ್ತೊಬ್ಬ ಪಂಚ ಎಸಿ ಕಛೇರಿಯ ಅಕ್ಕ ಪಕ್ಕ ದಲ್ಲಿ ಮರೆಯಾಗಿ ನಿಂತು ಚಾಸಾಃ 1 ರವರು ಸನ್ನೆಗಾಗಿ ಕಾಯುತ್ತಿದ್ದೆವು. ಸುಮಾರು 3-30 ಗಂಟೆಗೆ ಚಾಸಾಃ 1 ಮತ್ತು 2 ರವರು ಎಸಿ ಕಛೇರಿಯಿಂದ ಯಾವುದೆ ಸನ್ನೆ ನೀಡದೆ ಹೊರಗೆ ಬಂದು ಬಸ ನಿಲ್ದಾಣದ ಕಡೇಗೆ ಹೊರಟರು. ಆಗ ನಾನು ಚಾಸಾಃ 1 ರವರಿಗೆ ದೂರವಾಣಿ ಕರೆ ಮಾಡಿದಾಗ ಆರೋಪಿ ತನ್ನಿಂದ ಯಾವುದೆ ಲಂಚದ ಹಣ ಸ್ವಿಕರಿಸಲಿಲ್ಲ ಕಡತ ನೊಡಿ ಹೆಳುತ್ತೆನೆಂದು ಹಿಂದಿರುಗಿಸಿರುತ್ತಾನೆಂದು ತಿಳಿಸಿದರು. ನಾನು ಸಂಜೆ 4-00 ಗಂಟೆಗೆ ಚಾಸಾಃ 2 ರವರಿಗೆ ಕರೆಮಾಡಿ ಪುನಃ ವಿಚಾರಿಸುವಂತೆ ತಿಳಿಸಿದೆ. ಆದರೆ ಮತ್ತೆ ಸಂಜೆ 4-30 ಕ್ಕೆ ಚಾಸಾಃ 1 ಮತ್ತು 2 ರವರು ಎಸಿ ಕಛೇರಿಯಿಂದ ಯಾವುದೆ ಸನ್ನೆ ನೀಡದೆ ಹೊರಗೆ ಬಂದು ಬಸ ನಿಲ್ದಾಣದ ಕಡೆಗೆ ಹೊರಟರು. ನಾನು ಚಾಸಾಃ 1 ರವರ ಬಳಿ ಹೊಗಿ ವಿಚಾರಿಸಿದಾಗ ಆರೋಪಿತರು ಡಿಸಿ ಕಛೇರಿಯಲ್ಲಿರುವ ನಕಾಶೆ ಮತ್ತು ಚಕ್ಕು ಬಂದಿಯನ್ನು ಪರಿಶೀಲಿಸಿ 2-3 ದಿನಗಳ ನಂತರ ಹೆಳುತ್ತೆನೆಂದು ಹೆಳಿದ ಬಗ್ಗೆ ತಿಳಿಸಿದರು. ನಂತರ ಸಿಬ್ಬಂದಿ ಮತ್ತು ಪಂಚರು ಎಲ್ಲರೂ ನಮ್ಮ ಕಛೇರಿಗೆ ಹಿಂದಿರುಗಿದೆವು. ಕಛೇರಯಲ್ಲಿ ಚಾಸಾಃ 1 ರವರ ಬಳಿ ಇದ್ದ ಮೊಬೈಲ ಪಡೆಡು ಪರಿಶೀಲಿಸಿ ಸಂಭಾಷಣೆ ಕೆಳಿದಾಗ ಅವರು ಹೇಳಿದಂತೆ ದಾಖಲಾಗಿತ್ತು. ಸದರಿ ಸಂಭಾಷಣೆಯನ್ನು ಒಂದು ಬಿಳಿ ಹಾಳೆಯಲ್ಲಿ ಬರೆಸಿ ಪಂಚರ ಸಹಿ ಪಡೆದು ನಾನು ಸಹಿ ಮಾಡಿರುತ್ತೆನೆ. ನಿಪಿ 26 ರನ್ನು ಸಾಕ್ಷಿ ನೊಡಿ ಗುರುತಿಸುತ್ತಾರೆ.

13. ಚಾಸಾಃ 1 ರವರಿಗೆ ತಮ್ಮ ಪ್ಯಾಂಟ ಜೇಬಿನಲ್ ಇಟ್ಟ ಲಂಚದ ಹಣವನ್ನು ತೆಗದು ಹಾಜರು ಪಡಿಸಲು ಸೂಚಿಸಿದ್ದು. ಅವರು ಹಾಜುರ ಪಡಿಸಿದ್ದನ್ನು ನಾನು ಪಂಚರಿಗೆ ನೀಡಿ ಹಿಂದೆ ವಹಿಸಿಕೊಡು ಪಂಚನಾಮೆಕಾಲದಲ್ಲಿ ನಮೂದಿಸಿಕೊಂಡಿದ್ದ ನೊಟುಗಳಿಗೆ ತುಲನೆ ಮಾಡಿ ನೊಡಲು ಸೂಚಿಸಿದ್ದು. ಅದರಂತೆ ಅವರು ಪರಶೀಲಿಸಿದಾಗ ಅದೆ ಹಣ ಇರುತ್ತದೆಂದು ಖಾತ್ರಿ ಪಟ್ಟಿರುತ್ತದೆ. ನಂತರ ಸದರಿ ಹಣವನುನ ಚಾಸಾಃ 1 ರವರಿಗೆ ಹಿಂದಿರುಗಿಸಿ ಆರೋಪಿ ಮತ್ತೆ ದೂರವಾಣಿ ಕರೆ ಮಾಡಿ ಕೆಲಸದ ಬಗ್ಗೆ ಮಾತನಾಡಿದರೆ ಸದರಿ ಹಣವನ್ನು ತೆಗೆದುಕೊಂಡು ಲೊಕಾಯುಕ್ತ ಕಛೇರಿಗೆ ಬರುವಂತೆ ಸೂಚಿಸಿದ್ದೆ. ನಂತರ ನನ್ನ ಸಿಬ್ಬಂದಿಗಳು ಮತ್ತು ಪಂಚರಿಗೆ ಪ್ರಕರಣ ಗೌಪ್ಯತೇಯನ್ನು ಕಾಪಾಡಿಕೊಳ್ಳುವಂತೆ ಸೂಚಿಸಿ ಸಂಜೆ 5-15 ರಿಂದ 6-00 ಗಂಟೆಯ ವರೆಗೆ ನಮ್ಮ ಕಛೇರಿಯಲ್ಲಿ ಪಂಚರ ಸುಮಕ್ಷಮ ನಮ್ಮ ಸಿಬ್ಬಂದಿ ಚಾಸಾಃ 10 ರವರ ಸಹಾಯ ದಿಂದ ಕಛೇರಿಯ ಲ್ಯಾಪಟಾಪನಲ್ಲಿ ನಿಪಿ 25 ರಂತೆ ಪಂಚನಾಮೆಯನ್ನು ಬೆರಳಚ್ಚು ಮಾಡಿಸಿ ಮುದ್ರಿಸಿ ಪಂಚರ ಸಹಿ ಪಡೆದು ನಾನು ಸಹಿ ಮಾಡಿರುತ್ತೆನೆ. ನಿಪಿ 25 ರ ಮೇಲಿನ ಸಾಕ್ಷಿಯ

ಸಹಿಯನ್ನು ನಿಪಿ 25(ಡಿ) ಎಂದು ಗುರುತಿಸಲಾಯಿತು.ಚಾಸಾಃ 10 ರವರ ಸಹಿಯನ್ನು ಸಾಕ್ಷಿ ಗುರುತಿಸಿದ್ದು ಅದನ್ನು ನಿಪಿ 25(ಇ) ಎಂದು ಗುರುತಿಸಲಾಯಿತು.

14. ಅದೆ ದಿನ ಚಾಸಾಃ 1 ರಿಂದ 3 ರವರ ಹೇಳಿಕೆ ದಾಖಲಿಸಿ ಕೊಂಡಿರುತ್ತೆನೆ. ನಂತರ ಚಾಸಾಃ 6 ರಿಂದ 11 ಮತ್ತು 13 ರವರ ಹೇಳಿಕೆ ದಾಖಲಿಸಿ ಕೊಂಡಿರುತ್ತೆನೆ. ಆನಂತರ ನನಗೆ ವರ್ಗಾವಣೆ ಯಾಗಿದ್ದು ಮುಂದು ವರಿದ ತಿನಿಖೆಯನ್ನು ಸಂಪೂರ್ಣ ಕಡತದೊಂದಿಗೆ ಚಾಸಾಃ 20 ರವರಿಗೆ ವಹಿಸಿಕೊಟ್ಟಿರುತ್ತೆನೆ.

<u>ಪಾಟೀ ಸವಾಲು ಆರೋಪಿತರ ಪರವಾಗಿ ಶ್ರೀ. ಸಿ.ಎಸ್.ಎಮ್. ವಕೀಲರಿಂದ</u>

(ನನ್ನ ಉಕ್ತ ಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿದೆ)

ಓ.ಹೇ.ಕೆ.ಸ. ಇದೆ.

ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಯಾದಗಿರಿ.